ಕೋರಿರುತ್ತಾರೆ. ಆದ್ದರಿಂದ ಈ ವಿಷಯವಾಗಿ ಸದರಿಯವರಿಗೆ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಿಂದ ಪತ್ರ ವ್ಯವಹಾರ ನಡೆಸಲಾಗುತ್ತಿದ್ದು ಹಸ್ತಾಂತರದ ಬಗ್ಗೆ ಪರಿಶೀಲನೆಯಲ್ಲಿರುತ್ತದೆ.

ಕಾರ್ಮಿಕರು ನಡೆಸುತ್ತಿರುವ ನಿರಂತರ ಧರಣಿ

1131 (1573); ಶ್ರೀ ದತ್ತಾತ್ರೇಯ ಸಿ. ಪಾಟೀಲ ರೇವೂರು (ಅಪ್ಪುಗೌಡ)

ಅ) ಕಲಬುರಗಿ ಮಹಾನಗರಪಾಲಿಕೆಯಲ್ಲಿ ದಿನದ 24 ಗಂಟೆ ನಿರಂತರ ಧರಣಿ, ಸತ್ಯಾಗ್ರಹ ಮಾಡುತ್ತಿರುವ ಗುತ್ತಿಗೆ ಕಾರ್ಮಿಕರ ಸಮಸ್ಯೆ ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಇವರುಗಳು ನಿರಂತರ ಧರಣಿ ನಡೆಸುತ್ತಿರಲು ಕಾರಣವೇನು; ಇವರು ಪಾಲಿಕೆಗೆ ಯಾವ ಸಂಬಂಧ ಹೊಂದಿದ್ದಾರೆ;

ಇ) ಹಾಗಿದ್ದಲ್ಲಿ, ಧರಣಿ ನಿರತ ಕಾರ್ಮಿಕರ ಸಮಸ್ಯೆಯ ಬಗ್ಗೆ ಸರ್ಕಾರದ ಕ್ರಮವೇನು;

ಈ) ದಿನಾಂಕ:15.01.2015ರಂದು ನಗರ ಗುತ್ತಿಗೆ ಕಾರ್ಮಿಕರು ಮರಣ ಹೊಂದಿರುವ ಬಗ್ಗೆ ಸರ್ಕಾರದ ಸಹಾನುಭೂತಿ ಹಾಗೂ ಅವರಿಗೆ ನೀಡಲಾದ ಪರಿಹಾರವೇನು;

ಉ) ಹಾಗಿದ್ದಲ್ಲಿ, ಈ ಪರಿಹಾರ ತಾತ್ಕಾಲಿಕವೋ ಅಥವಾ ಶಾಶ್ವತವೋ ಎಂಬುದನ್ನು ಸರ್ಕಾರ ಯಾವಾಗ ನಿರ್ಣಯಿಸುತ್ತದೆ?

ಶ್ರೀ ವಿನಯಕುಮಾರ್ ಸೊರಕೆ (ನಗರಾಭಿವೃದ್ಧಿ ಸಚಿವರು)

ಅ) ಹೌದು, ಸರ್ಕಾರದ ಗಮನಕ್ಕೆ ಬಂದಿದೆ.

ಆ) ಕಲಬುರಗಿ ಮಹಾನಗರಪಾಲಿಕೆಯಲ್ಲಿ 463 ಕಾರ್ಮಿಕರನ್ನು ಸ್ವಚ್ಛತೆ ಕೆಲಸಕ್ಕಾಗಿ ಗುತ್ತಿಗೆದಾರರು ನೇಮಿಸಿಕೊಂಡಿರುತ್ತಾರೆ. 2010ನೇ ಸಾಲಿನಿಂದ 2011ನೇ ಸಾಲಿನ ವರೆಗೆ 20 ತಿಂಗಳ ವೇತನ ಬಾಕಿ ಹಣ ಪಾವತಿಸುವ ಕುರಿತು ನೌಕರರು ಧರಣಿ ನಡೆಸುತ್ತಿದ್ದಾರೆ. ಈ ನೌಕರರು

ಹೊರಗುತ್ತಿಗೆ ಆಧಾರದ ಮೇಲೆ ಮಹಾನಗರಪಾಲಿಕೆಯಲ್ಲಿ ಕೆಲಸ ನಿರ್ವಹಿಸುತ್ತಿದ್ದಾರೆ.

ಇ) ಈ ನೌಕರರು ಹೊರಗುತ್ತಿಗೆ ಆಧಾರದ ಮೇಲೆ ಮಹಾನಗರಪಾಲಿಕೆಯಲ್ಲಿ ಕೆಲಸ ನಿರ್ವಹಿಸುತ್ತಿದ್ದು ಅವರಿಗೆ ಜಿಲ್ಲಾ ನ್ಯಾಯಾಲಯದ ಆದೇಶ ದಿನಾಂಕ:30.09.2013 ಮತ್ತು 03.10.2013 ಆದೇಶ ರೀತ್ಯಾ ಮಹಾನಗರಪಾಲಿಕೆ 2007 ರಿಂದ ಏಪ್ರಿಲ್ 2010ರವರೆಗೆ ಪೌರಕಾರ್ಮಿಕರಿಗೆ ಹಣ ಪಾವತಿಸಲಾಗಿದೆ. ಆದರೆ ಎಲ್ಲಾ ಪೌರಕಾರ್ಮಿಕರು ಪುನಃ ಮೇ 2010 ರಿಂದ ಜೂನ್ 2012 ರವರೆಗೆ 21 ತಿಂಗಳ ಬಾಕಿ ಹಣ ನೀಡುವಂತೆ ಕೋರಿರುತ್ತಾರೆ.

ಈ ಕುರಿತು ಕಾರ್ಮಿಕ ನ್ಯಾಯಾಲಯ ಮತ್ತು ಇಂಡಸ್ಟ್ರೀಯಲ್ ಟ್ರಿಬ್ಯೂನಲ್ ನ್ಯಾಯಾಲಯ, ಹುಬ್ಬಳ್ಳಿಯಲ್ಲಿ ವಿಚಾರಣೆ ಬಾಕಿ ಇದ್ದು, ಈ ನ್ಯಾಯಾಲಯಗಳ ಆದೇಶ ನಿರೀಕ್ಷಿಸಲಾಗಿದೆ.

ಈ) ಪಾಲಿಕೆಯಿಂದ ಯಾವದೇ ಪರಿಹಾರ ನೀಡಿರುವುದಿಲ್ಲ.

ಉ) ಅನ್ವಯಿಸುವುದಿಲ್ಲ.

ಖಾಲಿ ಹುದ್ದೆಗಳ ಭರ್ತಿ

1132 (1574); ಶ್ರೀ ದತ್ತಾತ್ರೇಯ ಎಸ್. ಪಾಟೀಲ

ಅ) ಕಲಬುರಗಿ ಮಹಾನಗರಪಾಲಿಕೆಯಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡುವ ಬಗ್ಗೆ ಸರ್ಕಾರದ ಕ್ರಮವೇನು?

ಆ) ಈ ಹುದ್ದೆಗಳು ಖಾಲಿ ಇರುವುದರಿಂದ ಕಾಮಗಾರಿಗಳ ಕುಂಟಿತವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ವಿನಯಕುಮಾರ್ ಸೊರಕೆ (ನಗರಾಭಿವೃದ್ಧಿ ಸಚಿವರು)

ಅ) ಮಹಾನಗರ ಪಾಲಿಕೆಗಳಲ್ಲಿ ಖಾಲಿಯಿರುವ 1924 ಹುದ್ದೆಗಳನ್ನು ಭರ್ತಿ ಮಾಡಲು ಆರ್ಥಿಕ ಇಲಾಖೆಯು ಅನುಮೋದನೆ ನೀಡಿರುತ್ತದೆ. ಈ